**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ** 577 222, ☎ 08182-246165 **www.shimul.coop**

ಐ.ಎಫ್.ಟಿ. ಸಂಖ್ಯೆ/ಶಿದಾಚಿಸಹಾಒ/ಕ್ಷೀರಭಾಗ್ಯ/ಟೆಂಡರ್/2493/2016-17 **ದಿನಾಂಕ: 25.06.2016**

**-: *ಸಾರಿಗೆ ವಾಹನಗಳನ್ನು ಹಾಗೂ ತುಂಡು ಗುತ್ತಿಗೆ ಕೆಲಸ ನಿರ್ವಹಣೆಗೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ* :-**

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ "ಕ್ಷೀರಭಾಗ್ಯ" ಯೋಜನೆಯಡಿ ಹಾಲಿನ ಪುಡಿಯನ್ನು ಸರಬರಾಜು ಮಾಡಲು ವಿವಿಧ ಮಾರ್ಗಗಳಿಗೆ ಹಾಗೂ ಹಾಲಿನ ಪುಡಿಯನ್ನು ಪ್ಯಾಕ್ ಮಾಡಲು ತುಂಡು ಗುತ್ತಿಗೆ ಕೆಲಸಕ್ಕೆ ಕೆಳಕಂಡ ವರ್ಗೀಕೃತ ಟೆಂಡರ್ ಕರೆಯಲಾಗಿದೆ.

**ಮಾರ್ಗಗಳ ವಿವರ:**

| ಕ್ರ.ಸಂ | ಮಾರ್ಗಗಳು | ಕನಿಷ್ಟ ಸಾಮರ್ಥ್ಯ ಟನ್‌ಗಳಲ್ಲಿ | ವಾಹನಗಳ ಸಂಖ್ಯೆ | ಇ.ಎಂ.ಡಿ ಮೊತ್ತ ರೂಗಳಲ್ಲಿ |
|---|---|---|---|---|
| 1 | ಶಿವಮೊಗ್ಗ ಕೇಂದ್ರ ಡೇರಿಯಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ | 6 | 2 | 20,000/- |

**ತುಂಡು ಗುತ್ತಿಗೆ ಕೆಲಸದ ವಿವರ:**

| ಕ್ರ.ಸಂ | ಕೆಲಸದ ವಿವರ | ಇ.ಎಂ.ಡಿ ಮೊತ್ತ ರೂಗಳಲ್ಲಿ |
|---|---|---|
| 2 | ಶಿವಮೊಗ್ಗ ಡೈರಿಯಲ್ಲಿ SMP/WMP ಹಾಲಿನ ಪುಡಿಯನ್ನು ಚಿಲ್ಲರೆಯಾಗಿ ಪ್ಯಾಕ್ ಮಾಡುವ ಹಾಗೂ ಸದರಿ ಪ್ಯಾಕಿಂಗ್ ಯಂತ್ರಗಳ ಚಾಲನೆ ಮತ್ತು ನಿರ್ವಹಣೆಯ ತುಂಡು ಗುತ್ತಿಗೆ ಕೆಲಸಗಳು (ಕನಿಷ್ಟ ಕಾರ್ಮಿಕರ ಸಂಖ್ಯೆ:ಅಂದಾಜು 3(Skilled) +10(Un Skilled) =**ಒಟ್ಟು 13**) | 35,000/- |

ಮೇಲ್ಕಂಡ ಮಾರ್ಗಗಳಿಗೆ ಹಾಗೂ ತುಂಡು ಗುತ್ತಿಗೆ ಕೆಲಸಕ್ಕೆ ಒಂದು ವರ್ಷದ ಅವದಿಗೆ ಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ (ಟೆಕ್ನಿಕಲ್/ಕಮರ್ಷಿಯಲ್) ಟೆಂಡರ್ ಕರೆಯಲಾಗಿದ್ದು ವಾಹನಗಳನ್ನು ಹೊಂದಿರುವ ಮಾಲಿಕರು/ ಅರ್ಹ ಗುತ್ತಿಗೆದಾರರು / ಸಂಸ್ಥೆಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 29.06.2016 ರಿಂದ** |
| 2 | **ಟೆಂಡರ್ ಫಾರಂಗಳನ್ನು ಇ-ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ** | ದಿನಾಂಕ: 26.07.2016 ರಂದು ಸಂಜೆ: 17.30ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **29.07.2016** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: 02**.08.2016** ರಂದು ಬೆಳಿಗ್ಗೆ: **11.30** ಗಂಟೆಗೆ |

## ಕ್ರಮ ಸಂಖ್ಯೆ (1) ರ ಷರತ್ತು ಮತ್ತು ನಿಬಂಧನೆಗಳು:-

1. ಅರ್ಜಿದಾರರು ಶಿವಮೊಗ್ಗ ಕೇಂದ್ರ ಡೈರಿಯಿಂದ ಹಾಲಿನ ಪುಡಿ ಸಾಗಾಣಿಕೆ ದರವನ್ನು ಪ್ರತಿ ಟ್ರಿಪ್ / ಟನ್‌ಗೆ ನಮೂದಿಸುವುದು.
2. ಹಾಲಿನ ಪುಡಿಯನ್ನು ಒಕ್ಕೂಟದಿಂದ ಸೂಚಿಸುವ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಿಗೆ ಹಾಲಿನ ಪುಡಿ ಸಾಗಾಣಿಕೆ ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವ ಮೊತ್ತದಲ್ಲಿ ಲೋಡಿಂಗ್/ ಅನ್‌ಲೋಡಿಂಗ್ ಮೊತ್ತ ಹಾಗೂ ಅನ್ವಯಿಸುವ ಎಲ್ಲಾ ತೆರಿಗೆಗಳು ಸೇರಿರುತ್ತದೆ.
3. ಹಾಲಿನ ಪುಡಿಯನ್ನು ನಿಗಧಿತ ಸಮಯದಲ್ಲಿ ಸರಬರಾಜು ಮಾಡವುದು ಅತಿ ಮುಖ್ಯವಾಗಿರುತ್ತದೆ ಆದ ಕಾರಣ ತುರ್ತು ಸಂದರ್ಭದಲ್ಲಿ ನಿಗಧಿ ಪಡಿಸಿದ ವಾಹನಗಳ ಸಂಖ್ಯೆಗಿಂತ ಹೆಚ್ಚಿಗೆ ವಾಹನಗಳು ಬೇಕಾಗಿದಲ್ಲಿ ಗುತ್ತಿಗೆದಾರರು ಸ್ವಂತ ವಾಹನದ ಜೊತೆಗೆ ಬಾಡಿಗೆ ವಾಹನವನ್ನು ಒದಗಿಸಬೇಕಾಗಿರುತ್ತೆದೆ.

ಮುಂದುವರೆದಿದೆ . . . . .

4. ಹಾಲಿನ ಪುಡಿಯ ಸಾಗಾಣಿಕೆ ಕೆಲವು ಸಂದರ್ಭಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ವಾಹನವು ರಾತ್ರಿ ವೇಳೆ ಹಾಲ್ಟ್ ಮಾಡಬೇಕಾಗಿದಲ್ಲಿ ಹೆಚ್ಚುವರಿ ಬಾಡಿಗೆಯನ್ನು ನೀಡಲು ಅವಕಾಶವಿರುವುದಿಲ್ಲಾ.
5. ತಾಲ್ಲೂಕು ಕೇಂದ್ರಗಳ ಪೂರ್ವ ನಿಗಧಿತ ಸ್ಥಳಕ್ಕೆ ಹಾಲಿನ ಪುಡಿಯನ್ನು ಸರಬರಾಜು ಮಾಡಬೇಕಾಗಿರುತ್ತದೆ. ಆದರೆ ಕೆಲವೊಂದು ಸಂದರ್ಭದಲ್ಲಿ ಪೂರ್ವ ನಿಗಧಿತ ಸ್ಥಳ ಬದಲಾವಣೆ ಆದಲ್ಲಿ ಹೆಚ್ಚುವರಿ ಬಾಡಿಗೆ ನೀಡಲು ಅವಕಾಶವಿರುವುದಿಲ್ಲಾ.
6. ಹಾಲಿನ ಪುಡಿ ಸಾಗಾಣಿಕೆ ವಿಮೆಯನ್ನು ಒಕ್ಕೂಟದಿಂದ ಮಾಡಿಸಲಾಗುವುದು. ಹಾಲಿನ ಪುಡಿ ಸರಬರಾಜುವಿನ ಮುಂಚೆ ವಾಹನದ ವಿವರ(ಸಂಖ್ಯೆ ಮತ್ತು ವಾಹನದ ವಿಧ)ವನ್ನು ವಿಮೆ ಮಾಡಿಸಲು ಅನುಕೂಲವಾಗುವಂತೆ
ಕಚೇರಿಗೆ ಸಲ್ಲಿಸುವುದು. ತಪ್ಪಿದಲ್ಲಿ ವಿಮೆ ಮಾಡಿಸದೆ ಆಗುವ ಅನಾಹುತಗಳಿಗೆ ಅರ್ಜಿದಾರರು ಜವಾಬ್ದಾರರಾಗಿರುತ್ತಾರೆ.
7. ಹಾಲಿನ ಪುಡಿಯ ಜೊತೆಗೆ ಇತರೆ ಯಾವುದೇ ಪದಾರ್ಥಗಳನ್ನು ಸರಬರಾಜು ಮಾಡಲು ಅವಕಾಶವಿರುವುದಿಲ್ಲ
8. ಹಾಲಿನ ಪುಡಿ ಆಹಾರ ಪದಾರ್ಥವಾಗಿದ್ದು ಇದರ ಸರಬರಾಜು ಆಹಾರ ಸುರಕ್ಷತಾ ಖಾಯಿದೆಯ ಷರತ್ತುಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.
9. ಯಶಸ್ವಿ ಟೆಂಡರ್‌ದಾರರು ಹಾಲಿನ ಪುಡಿಯನ್ನು ಹವಾಮಾನ ಮತ್ತು ಇತರೆ ವೈಪರೀತ್ಯದಿಂದ ರಕ್ಷಿಸುವಂತೆ ಸಾಗಾಣಿಕೆಗೆ ಕವಚವುಳ್ಳ ವಾಹನವನ್ನು ಒದಗಿಸುವುದು ಹಾಗೂ ಸುರಕ್ಷಿತವಾಗಿ ಹಾಲಿನ ಪುಡಿಯನ್ನು ಸಾಗಾಣಿಕೆ ಮಾಡುವುದು.
10. ಸಾಮಾನ್ಯ ಸಂದರ್ಭಗಳಲ್ಲಿ ಗುತ್ತಿಗೆದಾರರು ಪ್ರಸ್ತುತ ವಾಹನ ಗುತ್ತಿಗೆ ಕರಾರಿನ ಪರಿ ಸಮಾಪ್ತಿಗೊಳಿಸುವಂತಿಲ್ಲ. ವಿಶೇಷ ಸಂದರ್ಭಗಳಲ್ಲಿ ಅಂದರೆ ಗುತ್ತಿಗೆದಾರರು ಮರಣ ಹೊಂದಿದಾಗ ಅಥವಾ ವಾಹನ ಅಪಘಾತಕ್ಕೀಡಾಗಿ ದುರಸ್ಥಿ ಅಸಾದ್ಯವೆಂದಾಗ ಪ್ರಸ್ತುತ ಕರಾರನ್ನು ಪರಿಸಮಾಪಿಗೊಳಿಸುವ ತಮ್ಮ ಇಂಗಿತವನ್ನು 30 ದಿನಗಳ ಸೂಚನೆಯನ್ನು ಕೊಟ್ಟು ಕಚೇರಿಗೆ ತಿಳಿಸತಕ್ಕದ್ದು. ಅಂತಹ ಸೂಚನೆಯನ್ನು ಒಕ್ಕೂಟವು ಪರಿಶೀಲಿಸಿ ಪ್ರತಿಶತ 50 ರವರೆಗೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರಿಕೆಯನ್ನು ರದ್ದುಪಡಿಸಲಾಗುವುದು.
11. ಸೂಚನಾಪತ್ರದಲ್ಲಿ ನಿಗದಿಪಡಿಸಿರುವಂತೆ ಸಕಾಲದಲ್ಲಿ ಗುತ್ತಿಗೆ ಆದೇಶ ಪಡೆದು ಗುತ್ತಿಗೆ ಕಾರ್ಯಗತಗೊಳಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಲಾಗುವುದು.
12. ಅಸಮರ್ಪಕ ಗುತ್ತಿಗೆ ನಿರ್ವಹಣೆ/ವಾಹನ ವಿಳಂಬ/ಕಳ್ಳತನ ಮುಂತಾದ ತಪ್ಪುಗಳಿಗೆ ಕರಾರಿನಲ್ಲಿ ತಿಳಿಸಿರುವಂತೆ ಸೂಕ್ತ ದಂಡ ವಿಧಿಸಲಾಗುವುದು ಹಾಗೂ ಗುತ್ತಿಗೆದಾರಿಕೆಯನ್ನು ರದ್ದು ಪಡಿಸಿ ಭದ್ರತಾ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾದ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರವರು ಹೊಂದಿರುತ್ತಾರೆ.
13. ಯಶಸ್ವಿಯಾದ ಗುತ್ತಿಗೆದಾರರು ಕಡ್ಡಾಯವಾಗಿ ಎರಡು ಭಾವಚಿತ್ರ, ವೃತ್ತಿ ತೆರಿಗೆ ನೋಂದಣಿ ಹಾಗೂ ಆದಾಯ ತೆರಿಗೆ ಪಾನ್ ಕಾರ್ಡ್ ಮಾಡಿಸಿ ಗುತ್ತಿಗೆ ಕೆಲಸದ ಆದೇಶವನ್ನು ಪಡೆಯುವಾಗ ಒಕ್ಕೂಟದಲ್ಲಿ ಗುತ್ತಿಗೆ ಪಡೆದ ಎರಡು ಸಾಕ್ಷಿದಾರರ ಭಾವಚಿತ್ರವನ್ನು ಸಹಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
14. ಮೇಲಿನ ನಿಬಂಧನೆಗಳಲ್ಲದೇ ಕಾಲ ಕಾಲಕ್ಕೆ ಸರಕಾರ/ಒಕ್ಕೂಟವು ಹೊರಡಿಸುವ ನಿಯಮಗಳೇನಾದರೂ ಬಂದಲ್ಲಿ ತಮಗು ಅಳವಡಿಸಲಾಗುವುದೆಂದು ತಿಳಿಯತಕ್ಕದ್ದು.
15. ಸಾಗಾಣಿಕೆ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ ನಿ., ಮಾಚೇನಹಳ್ಳಿ, ಶಿವಮೊಗ್ಗ ಇವರ ಹೆಸರಿಗೆ ಪಾವತಿ ಕೋರಿ ಸಲ್ಲಿಸುವುದು.
16. ಯಾವುದಾದರೂ ತಂಟೆ ತಕರಾರುಗಳ ಉಂಟಾದಲ್ಲಿ ಸ್ಥಳೀಯ ಶಿವಮೊಗ್ಗ ನ್ಯಾಯಾಲಯದಲ್ಲಿ ಮಾತ್ರ ಇತ್ಯರ್ಥ ಮಾಡಿಕೊಳ್ಳವುದು. ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಟೆಂಡರ್ ಫಾರಂನಲ್ಲಿ ಲಭ್ಯವಿರುತ್ತದೆ.

ಮುಂದುವರೆದಿದೆ . . . . .

**ಕ್ರಮ ಸಂಖ್ಯೆ (2) ರ ಷರತ್ತು ಮತ್ತು ನಿಬಂಧನೆಗಳು:-**

ಟೆಂಡರ್‌ದಾರರು ಪಿ.ಎಫ್., ಇ.ಎಸ್.ಐ, ಸರ್ವೀಸ್ ಟ್ಯಾಕ್ಸ್, ಪ್ರೊಫೆಷನಲ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ನೋಂದಣಿದಾರರಾಗಿದ್ದು ಹಾಗೂ ಗುತ್ತಿಗೆ ಕೆಲಸ ನಿರ್ವಹಿಸಲು ಕಾಂಟ್ರ್ಯಾಕ್ಟ್ ಲೇಬರ್ ಲೈಸೆನ್ಸ್ ಹೊಂದಿದವರಾಗಿರತಕ್ಕದ್ದು.

ಅರ್ಹ ಗುತ್ತಿಗೆದಾರರು ಮೇಲೆ ತಿಳಿಸಿದ ಎಲ್ಲಾ ಕೆಲಸಗಳನ್ನು ನಿರ್ವಹಿಸಲು **ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್** (ಟೆಕ್ನಿಕಲ್ ಟೆಂಡರ್ ಮತ್ತು ಕಮರ್ಷಿಯಲ್ ಟೆಂಡರ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಮರ್ಷಿಯಲ್ ಟೆಂಡರನ್ನು ಗಣನೆಗೆ ತೆಗೆದುಕೊಳ್ಳುವಾಗ ಕ್ರಮ ಸಂಖ್ಯೆ (2) ರ ಕೆಲಸಗಳಿಗೆ ನಮೂದಿಸಿದ ದರಗಳನ್ನು ಪರಿಗಣಿಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಮಾರುಕಟ್ಟೆ ವಿಭಾಗದಿಂದ ಪಡೆಯಬಹುದು. **ದೂರವಾಣಿ : (08182) 246344 / 246170.**

**www.shimul.coop**

ಸಹಿ/-

ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ
ಸಹಕಾರ ಹಾಲು ಒಕ್ಕೂಟ, ನಿ.,

ದಿನಾಂಕ 25.06.2016
ಸ್ಥಳ : ಶಿವಮೊಗ್ಗ ಡೈರಿ